ಶ್ರೀಮತಿ ಮನೋರಮಾ ಮಧ್ವರಾಜ್ : —ಈ ಉಡುಪಿ—ಮಲ್ಪೆ ಪ್ರಾಧಿಕಾರದ ಬಗ್ಗೆ ನಿನ್ನೆ ನಾನು 334ರ ನಿಯಮದಲ್ಲೂ ಸಹ ಕೇಳಿದ್ದೆ, ಸಚಿವರು ಉತ್ತರ ಕೊಟ್ಟಿದ್ದಾರೆ. ಸಚಿವರ ಹತ್ತಿರ ನಾನು ಚರ್ಚಿಸಿದ್ದೇನೆ. ಈ ರೀತಿ ಜನರಿಗೆ ತೊಂದರೆಯಾಗುವ ಸಂದರ್ಭದಲ್ಲಿ ನಾನು ಆ ಕಡೆ ಹೂತಾಗಲೂ ಸರ್ಕಾರದ ಗಮನಸೆಳೆದಿದ್ದೇನೆ. ಈಗಲೂ ಅದೇ ಪರಿಸ್ಥಿತಿ ಇದೆ. ದಯವಿಟ್ಟು ಸಚಿವರು ಉಡುಪಿಗೆ ಖುದ್ದು ಬಂದು ಜನಗಳ ದೂರನ್ನು ಕೇಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ನಗರಾಭಿವೃದ್ಧಿ ಸಚಿವರು):— ನಮ್ಮ ಪ್ರಾಧಿಕಾರದ ಪ್ರಕಾರ ಎಷ್ಟು ನಾವು ಕನ್‌ವರ್ಟ್ ಮಾಡುತ್ತೇವೆ. ಅದಕ್ಕೆ ಮಾತ್ರ ಅವರು ಬೆಟರ್‌ಮೆಂಟ್ ಜಾರ್ಜ್ ಕೊಡಬೇಕಾಗುತ್ತದೆ. ಉದಾಹರಣೆಗೆ : ಒಂದು ಎಕರೆ ಕನ್‌ವರ್ಟ್ ಮಾಡಿದರೆ ಅಷ್ಟಕ್ಕೆ ಕೊಡಬೇಕಾಗುತ್ತದೆ. ಮನೆ ಕಟ್ಟಲು ಕೇವಲ 500 ಆಡಿ ಕನ್‌ವರ್ಟ್ ಮಾಡಿದರೆ ಅಷ್ಟಕ್ಕೆ ಮಾತ್ರ ಚಾರ್ಜ್ ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಿದಂತೆ ಈ ಬಗ್ಗೆ ನಾನು ಉಡುಪಿಗೆ ಹೋಗಿ ಸಾರ್ವಜನಿಕ ದೂರುಗಳನ್ನು ವಿಚಾರಿಸುತ್ತೇನೆ.

ಮುಖ್ಯೋಪಾಧ್ಯಾಯರ ನೇಮಕಾತಿ

461 ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದಿರೆ):— ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರು ತಾಲ್ಲೂಕಿನ ಸಸಿಹಿತ್ಲು ಹಿರಿಯ ಪ್ರಾಥಮಿಕ ಶಾಲೆಗೆ ಪದವೀಧರ ಮುಖ್ಯೋಪಾಧ್ಯಾಯರಾಗಿ ಕನ್ನಡ, ಇಂಗ್ಲೀಷ್ ತಿಳಿಯದ ಮುಖ್ಯೋಪಾಧ್ಯಾಯರನ್ನು ನೇಮಕ ಮಾಡಿರುವುದು ನಿಜವೇ; ಶಾಲೆಯ ಕೆಲಸಗಳು ತೊಂದರೆಗೆ ಒಳಗಾಗಿರುವುದು ಸರಕಾರಕ್ಕೆ ತಿಳಿದಿರುವುದೆ;

ಆ) ಊರವರ ಹಾಗೂ ಜನ ಪ್ರತಿನಿಧಿಗಳ ಮನವಿಗಳು ಈ ಕುರಿತು ಬಂದಿರುವುದರಿಂದ ಸರಕಾರದವರು ಕೈಗೊಂಡಿರುವ ಕ್ರಮಗಳಾವುವು;

ಇ) ಸದ್ರಿ ಮುಖ್ಯೋಪಾಧ್ಯಾಯರನ್ನು ವರ್ಗಾಯಿಸಿ ಬೇರೆ ಮುಖ್ಯೋಪಾಧ್ಯಾಯರನ್ನು ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ (ಕಂದಾಯ) (ವಿದ್ಯಾಮಂತ್ರಿಗಳ ಪರವಾಗಿ),

(ಅ) (ಆ) ಮತ್ತು (ಇ) ಸಾಕಷ್ಟು ಕನ್ನಡ ಹಾಗೂ ಇಂಗ್ಲೀಷ್ ಪರಿಣತಿ ಇಲ್ಲದ ಅಧ್ಯಾಪಕರನ್ನು ಹೈಯರ್ ಪ್ರೈಮರಿ ಸ್ಕೂಲ್ ಸಸಿಹಿತ್ಲು ಮುಖ್ಯೋಪಾಧ್ಯಾಯರನ್ನು ನೇಮಿಸಿದಿದ್ದುದು ನಿಜ. ಇದರಿಂದ ಶಾಲೆಯ ಕಾರ್ಯಕಲಾಪಗಳಿಗೆ ಸ್ವಲ್ಪ ಮಟ್ಟಿಗೆ ತೊಂದರೆಯಾಗಿದ್ದು ಅವರನ್ನು ಅಲ್ಲಿಂದ ಬೇರೆ ಶಾಲೆಗೆ ವರ್ಗಾವಣೆ ಮಾಡಿ ಅವರ ಸ್ಥಾನದಲ್ಲಿ ಬೇರೆ ಮುಖ್ಯೋಪಾಧ್ಯಾಯರನ್ನು ನೇಮಿಸಲಾಗಿದೆ.

ಶ್ರೀ ಕೆ. ಸೋಮಪ್ಪ ಸುವರ್ಣ :— ನಮ್ಮ ಸಸಿಹಿತ್ಲು ಹಿರಿಯ ಪ್ರಾಥಮಿಕ ಶಾಲೆಗೆ ಬೀದರ್‌ನ ಉಪಾಧ್ಯಾಯರೊಬ್ಬರನ್ನು ಒಬ್ಬ ಮುಖ್ಯೋಪಾಧ್ಯಾಯರನ್ನಾಗಿ ನೇಮಿಸಿದ್ದಾರೆ. ಅವರಿಗೆ ಕನ್ನಡವೂ ಗೊತ್ತಿಲ್ಲ. ಇಂಗ್ಲೀಷೂ ಗೊತ್ತಿಲ್ಲ, ಉರ್ದೂನು ಗೊತ್ತಿಲ್ಲ; ನಾವೇನಾದರೂ ಕೇಳಿದರೆ ಬೇರೆ ಭಾಷೆಗಳು ಬರುವುದಿಲ್ಲ, ಮರಾಠಿ ಬರುತ್ತದೆನ್ನುತ್ತಾರೆ. ತುಳು ಬಲ್ಲಂಥ ಕನ್ನಡ ಕಲಿಯುವ ಮಕ್ಕಳ ಶಾಲೆಗೆ ಇಂತಹವರನ್ನು ಕಳಿಸಿದ್ದಾರೆ. ಕಳೆದ 9 ತಿಂಗಳಿಂದ ಅವರ ಬದಲಿಗೆ ಬೇರೆಯವರ ನೇಮಕವಾಗಬೇಕೆಂದು ಜಿಲ್ಲಾ ಮಟ್ಟದಿಂದ. ವಿಭಾಗ ಮಟ್ಟದಿಂದ ಹಿಡಿದು ವಿದ್ಯಾ ಸಚಿವರನ್ನು ಕೊನೆಗೆ ಮುಖ್ಯ ಮಂತ್ರಿಗಳನ್ನು ಸಹ ಕಂಡಿದ್ದೆ. ಈಗ ಹುಳಿ ಹೋಗಿದೆ; ಆದರೂ ಬದಲಾವಣೆ ಆಗಿಲ್ಲ 9 ತಿಂಗಳಾಯಿತು; ಇನ್ನಾದರೂ ಕನ್ನಡ ಮೇಸ್ಟರನ್ನು ನೇಮಿಸಬೇಕು. ನಮ್ಮ ಕಡೆ ಮುಖ್ಯೋಪಾಧ್ಯಾಯರನ್ನು ತಲೆಯ ಮೇಲಿನ ಮಂಡೆಗೆ ಹೋಲಿಸುವರು; ನಮ್ಮ ಶಾಲೆಯಲ್ಲಿ ಈಗ ಕನ್ನಡ ಮುಖ್ಯೋಪಾಧ್ಯಾಯರಿಲ್ಲದಿರುವುದರಿಂದ ಮಂಡೆ ಇಲ್ಲದ ಶಾಲೆ ಎನ್ನುತ್ತಾರೆ. ಆದ್ದರಿಂದ ನಮ್ಮ ದುರಾದೃಷ್ಟ ಶಾಲೆಗೆ ಮಂಡೆಯನ್ನು ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ :– ಅವರು ಹೇಳುವುದರಲ್ಲಿ ಅರ್ಥವಿದೆ. ಹಿಂದೆ ಆಕಸ್ಮಾತಾಗಿ ಸ್ಟೆಫೆಂಡರಿ ಗ್ರಾಜುಯೇಟ್ ಆದ ಹಿಂದಿ ಮತ್ತು ಮರಾಠಿ ಬರುವ ಟೀಚರ್ ಅನ್ನು ಡಿಡಿಪಿಐ ಅವರು ಹಾಕಿಬಿಟ್ಟಿದ್ದರು. ಈಗಾಗಲೇ ಅದನ್ನು ಬದಲಾಯಿಸಿದ್ದು ಪದ್ಮನಾಭಾಚಾರ್ಯ ಎಂಬ ಕನ್ನಡದವರನ್ನು ನೇಮಕ ಕೊಟ್ಟಿದ್ದೇವೆ. ಆದ್ದರಿಂದ ಈ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.

ಶ್ರೀ ಕೆ. ಸೋಮಪ್ಪ ಸುವರ್ಣ :– ವಂದನೆಗಳು.

ರಾಜ್ಯದ ನೀರಿನ ಪಾಲನ್ನು ಬಳಸಿಕೊಳ್ಳುವುದು

390 ಶ್ರೀ ಜಿ ರಾಜುಗೌಡ (ಹನೂರು):– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ನದಿ ನೀರಿನ ರಾಜ್ಯದ ಪಾಲನ್ನು ಸಂಪೂರ್ಣವಾಗಿ ಬಳಸಿ ಕೊಳ್ಳಬೇಕಾದರೆ ಕೃಷ್ಣಾ ನದಿ ಪಾತ್ರದ ಯೋಜನೆಗಳನ್ನು 2000ನೇ ಇಸವಿ ಅವದಿಯೊಳಗೆ ಪೂರ್ಣಗೊಳಿಸಲು ಪ್ರತಿ ವರ್ಷ (1ಕ್ಕೆ) ಕನಿಷ್ಟ ಎಷ್ಟು ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ?

ಆ) ಹಾಗಿದ್ದಲ್ಲಿ ಇದುವರೆಗೆ ಉಪಯೋಗಿಸಿಕೊಂಡಿರುವ ನೀರಿನ ಪ್ರಮಾಣವೆಷ್ಟು? ಹಾಗೂ ಇನ್ನು ಎಷ್ಟು ನೀರನ್ನು ಉಪಯೋಗಿಸಿಕೊಳ್ಳಬೇಕಾಗಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) ಕೃಷ್ಣಾ ನದಿ ಪಾತ್ರದಲ್ಲಿ ಬರುವ ಯೋಜನೆಗಳನ್ನು 2000ನೇ ಇಸವಿ ಅವಧಿಯೊಳಗೆ ಪೂರ್ಣಗೊಳಿಸಲು ಈಗಿನ ಅಂದಾಜು ಪ್ರಕಾರ ಸುಮಾರು 3000 ಕೋಟಿ ರೂಪಾಯಿಗಳು ಬೇಕಾಗುವುದು. ಪ್ರತಿವರ್ಷ ಸರಾಸರಿ 300 ರಿಂದ 600 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ.

ಆ) ಈಗ ಮುಗಿಸಿರುವ ಮತ್ತು ಭಾಗಶಃ ಕಾರ್ಯರೂಪದಲ್ಲಿರುವ ಯೋಜನೆಗಳಿಂದ ಪ್ರತಿ ಜಲವರ್ಷದಲ್ಲಿ ಸುಮಾರು 472 ಟಿ.ಎಂ.ಸಿ. ನೀರನ್ನು ಉಪಯೋಗಿಸಬಹುದು. ಉಳಿದ 264 ಟಿ.ಎಂ.ಸಿ. ನೀರಿನ ಉಪಯೋಗವನ್ನು ಪ್ರಗತಿಯಲ್ಲಿರುವ ಹಾಗೂ ಹೊಸ ಯೋಜನೆಗಳಿಂದ ಮಾಡಬೇಕಾಗಿದೆ.

ಶ್ರೀ ಜಿ ರಾಜುಗೌಡ :– ಸ್ವಾಮಿ ಈ ಬಚಾವತ್ ತೀರ್ಪಿನ ಪ್ರಕಾರ ನಮ್ಮ ರಾಜ್ಯಕ್ಕೆ ಕೃಷ್ಣೆಯಲ್ಲಿ ಎಷ್ಟು ಪಾಲು ಸಿಕ್ಕಿದೆ; ಈ 472 ಟಿ.ಎಂ.ಸಿ. ನೀರನ್ನು ಎಷ್ಟು ವರ್ಷದಿಂದ ಬಳಸಿಕೊಂಡಿದ್ದೀರಿ? ಉಳಿದ ನೀರನ್ನು ಎಷ್ಟು ವರ್ಷಗಳಲ್ಲಿ ಬಳಸಿಕೊಳ್ಳಬೇಕಾಗಿದೆ?

ಶ್ರೀ ಎಸ್. ಬಂಗಾರಪ್ಪ :– ಅಧ್ಯಕ್ಷರೇ, ಬಚಾವತ್ ತೀರ್ಪಿನ ಪ್ರಕಾರ ನಮ್ಮ ರಾಜ್ಯಕ್ಕೆ 734 ಟಿಎಂಸಿ ಸಿಕ್ಕಿದೆ. ಅದರಲ್ಲಿ ನಾವು ಈವರೆಗೆ ಉಪಯೋಗಿಸಿರುವುದು ಅನ್‌ಗೋಯಿಂಗ್ ಪ್ರಾಜೆಟ್‌ಗಳು ಮತ್ತು ಮುಗಿದಿರುವುದು ಎಲ್ಲಾ ಸೇರಿಸಿ 472 ಟಿಎಂಸಿ. ನಮಗೆ ಬ್ಯಾಲೆನ್ಸ್ ಉಳಿದಿರುವುದು 262 ಟಿಎಂಸಿ.

ಶ್ರೀ ಜಿ ರಾಜುಗೌಡ:– ಈ 262 ಟಿಎಂಸಿ ನೀರನ್ನು ನಾವು ಇನ್ನೂ ಉಪಯೋಗಿಸಿಕೊಂಡಿಲ್ಲ ಎಂಬುದೇ ಇಲ್ಲಿರುವ ಪ್ರಶ್ನೆ ಈ ನೀರನ್ನು 2000 ಇಸವಿವರೆಗೆ ಕಾಯದೆ ಅನುಪಯುಕ್ತ ಕಾರ್ಯಗಳನ್ನು ನಿಲ್ಲಿಸಿ 1995ರ ಹೊತ್ತಿಗೆ ಈ ನೀರನ್ನು ಸಹ ಉಪಯೋಗಿಸಿಕೊಳ್ಳಲು ಗಮನ ಕೊಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಸದಸ್ಯರ ಒತ್ತಡವನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ. ಏಕೆಂದರೆ ಪ್ರಪಂಚ ಬ್ಯಾಂಕಿನ ನೆರವಿನಿಂದ ಈ ಒಂದು ಕಾರ್ಯ ಪೂರ್ಣಗೊಳಿಸಬೇಕಾಗಿದೆ. ಈ ಶತಮಾನದ ಅಂತ್ಯದೊಳಗೆ ಕೃಷ್ಣಮೇಲ್ದಂಡೆ ಯೋಜನೆಗಳನ್ನು ಮುಗಿಸುವ ಗುರಿ ಇದೆ. ಆದಕ್ಕೆ ಹಲವಾರು ಕಾರಣಗಳಿಂದ ತಡವಾಗಿದೆ. ಈ ಬಗ್ಗೆ ಅನೇಕ ಸಲ ಇಲ್ಲಿ ಚರ್ಚೆ ಮಾಡಿದ್ದೇವೆ. ಹಣಕಾಸಿನ ತೊಂದರೆ ಮತ್ತು ಇತರೇ ಬೇರೆ ಬೇರೆ ಕಾರಣಗಳಿಂದ ಈ ಕೆಲಸ ತಡವಾಗಿ ಯೋಜನಾವೆಚ್ಚ ಸಹ ಹೆಚ್ಚಿದೆ. ಈಗ ಉಳಿದಿರತಕ್ಕ 262 ಟಿ.ಎಂ.ಸಿ. ನೀರು ಏನಿದೆ, ಅದನ್ನು